ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 357/2015

ಸಿ ಡಬ್ಲ್ಯೂ-7

ಪಿ ಡಬ್ಲ್ಯೂ- 7

ದಿಃ 22-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ಕುಮಾರ ಹಾರ್ಡಕರ

ತಂದೆಯ ಹೆಸರುಃ ಗುಂಡಪ್ಪ

ವಯಸ್ಸುಃ 40 ವರ್ಷ

ಉದ್ಯೋಗಃ ಪಿ.ಎಸ್.ಐ

ವಿಳಾಸಃ ಬೆಳಗಾವಿ

Evidence recorded through VC.

ಮುಖ್ಯ ವಿಚಾರಣೆ: ಮಾನ್ಯ ಎ ಪಿ ಪಿ ರವರಿಂದಃ

ನಾನು ದಿಃ04-07-2014 ರಿಂದ ದಿಃ17-04-2016 ರವರೆಗೆ ಅಂಕೋಲಾ ಪೋಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ದಿಃ 21-08-2014 ರಂದು ಮಾನ್ಯ ಜೆ ಎಂ ಎಫ್ ಸಿ ನ್ಯಾಯಾಲಯ ಅಂಕೋಲಾದಿಂದ ಬಂದಂತಹ ಖಾಸಗಿ ದೂರ ನಂ. 5/2014 ನೆದ್ದನ್ನು ಪಿ ಐ ಅಂಕೋಲಾ ಇವರು ಪ್ರಕರಣ ದಾಖಲಿಸಿ, ತನಿಖೆ ಕೈಗೊಳ್ಳಲು ಅನುಮತಿ ನೀಡಿದಂತೆ, ಅದೇ ದಿನ ಸಂಜೆ 7.15 ಗಂಟೆಗೆ ಸ್ವೀಕರಿಸಿಕೊಂಡು, ಠಾಣಾ ಗುನ್ನಾ ನಂ.165/2014

ಕಲಂ.504,506 ನೆದ್ದರ ಅಡಿಯಲ್ಲಿ ಪ್ರಕರಣ ದಾಖಲಿಸಿರುತ್ತೇನೆ. ಪ್ರಥಮ ವರ್ತಮಾನ ವರದಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ಖಾಸಗಿ ಫಿರ್ಯಾದಿ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಫಿರ್ಯಾದನ್ನು ನಿಪಿ-6, ಸಾಕ್ಷಿಯ ಸಹಿಯನ್ನು ನಿಪಿ-6ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರಥಮ ವರ್ತಮಾನ ವರದಿಯ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಪ್ರಥಮ ವರ್ತಮಾನ ವರದಿಯನ್ನು ನಿಪಿ-7, ಸಾಕ್ಷಿಯ ಸಹಿಯನ್ನು ನಿಪಿ-7ಎ ಎಂದು ಗುರುತಿಸಲಾಯಿತು. ದಿಃ22-08-2014 ರಂದು ತನಿಖೆಯನ್ನು ಮುಂದುವರೆಸಿ, ಪಂಚರಾದ ಚಾಸಾ-2 ಮತ್ತು 3 ರವರ ಸಮಕ್ಷಮದಲ್ಲಿ ಚಾಸಾ-1 ರವರು ತೋರಿಸಿದಂತೆ ಸ್ಥಳ ಪಂಚನಾಮೆಯನ್ನು ಬೆಳಿಗ್ಗೆ 11 ರಿಂದ ಮಧ್ಯಾಹ್ನ 12 ಗಂಟೆಯವರೆಗೆ ಜರುಗಿಸಿರುತ್ತೇನೆ. ಸಾಕ್ಷಿಯು ನಿಪಿ-2ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2ಡಿ ಎಂದು ಗುರುತಿಸಲಾಯಿತು. ನಂತರ ಫಿರ್ಯಾದಿಯ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ-4 ರಿಂದ 6 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ದಿಃ25-08-2014 ರಂದು ಆರೋಪಿಯು ತನಿಖೆಗೆ ಹಾಜರು ಪಡಿಸಿ, ವಿಚಾರಣೆ ಮಾಡಲು ಹುಡುಕಾಡಿದ್ದು, ಆದರೆ ಆತನು ಸಿಕ್ಕಿರುವುದಿಲ್ಲ.

3. ದಿಃ 14-01-2015 ರವರೆಗೆ ಆರೋಪಿಯು ಸಿಗದೇ ಇರುವ ಕಾರಣ ಹಾಗೂ ಆತನು ತನಿಖೆಗೆ ಹಾಜರಾಗದೇ ಇದ್ದ ಕಾರಣ ಹಾಗೂ ಆರೋಪಿಯ ವಿರುದ್ಧ ಸಾಕಷ್ಟು

ಸಾಕ್ಷಾಧಾರಗಳು ಕಂಡುಬಂದಿದ್ದರಿಂದ ಆರೋಪಿಯ ವಿರುದ್ಧ ಅಂತಿಮ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಆರೋಪಿಯನ್ನು ಗುರುತಿಸುತ್ತೇನೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್.ಆರ್.ಎನ್ ಇವರಿಂದಃ

4. ಮಾನ್ಯ ನ್ಯಾಯಾಲಯದಿಂದ ದಿಃ21-04-2014 ರಂದು ಪಿ ಎಸ್ ಐ ಅಂಕೋಲಾ ಇವರಿಗೆ ಸದರಿ ಪ್ರಕರಣವನ್ನು ತನಿಖೆ ಮಾಡಿ, ದಿಃ21-06-2014 ರ ಒಳಗಡೆ ಅಂತಿಮ ವರದಿಯನ್ನು ಸಲ್ಲಿಸಲು ನಿರ್ದೇಶನ ಬಂದಿತ್ತು ಎಂದರೆ ಸರಿ. ಅದೇ ದಿನ ಪಿ ಐ ಇವರು ಪಿ ಎಸ್ ಐ ಆದ ನಿಮಗೆ ಪ್ರಕರಣ ದಾಖಲಿಸಿ, ತನಿಖೆ ಮಾಡಿ, ವರದಿ ಕೊಡಲು ತಿಳಿಸಿರುತ್ತಾರೆ ಎಂದರೆ ಸಾಕ್ಷಿಯು ದಿಃ21-08-2014 ರಂದು ನನಗೆ ಕೊಟ್ಟಿದ್ದು, ಅದೇ ದಿನ ಪ್ರಕರಣ ದಾಖಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಪಿ ಐ ಇವರು ಕೊಟ್ಟ ಹಿಂಬರಹವನ್ನು ಸೃಷ್ಟಿ ಮಾಡಿಕೊಂಡಿರುತ್ತಾರಾ ಎಂದರೆ ಸಾಕ್ಷಿಯು ಅದರ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಮಾನ್ಯ ನ್ಯಾಯಾಲಯವು ಇಷ್ಟೇ ಸಮಯದ ಒಳಗೆ ವರದಿಯನ್ನು ಸಲ್ಲಿಸಲು ನಿರ್ದೇಶನ ಕೊಟ್ಟಿದ್ದರೂ ಸಹ ನೀವು ಉದ್ದೇಶಪೂರಕವಾಗಿ ವಿಳಂಬ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿಯು ವಿಚಾರಣೆಗೆ ಸಿಕ್ಕಿರುವುದಿಲ್ಲ ಎಂಬ ಕುರಿತು ನೀವು ಏನಾದರೂ ಹೇಳಿಕೆಯನ್ನು ಅಥವಾ ಯಾವುದಾದರೂ ದಾಖಲೆಯನ್ನು ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಆರೋಪಿಯದು ನ್ಯಾಯಾಲಯಕ್ಕೆ ಹೋಗುವಂತಹ ರಸ್ತೆಗೆ ತಾಗಿಕೊಂಡೇ ಸೂರ್ಯ ಲಾಡ್ಜ ಮತ್ತು

ರೆಸ್ಟೋರೆಂಟ್ ಇರುತ್ತದೆ ಎಂದರೆ ಸರಿ. ಅದಕ್ಕೆ ಹೊಂದಿಕೊಂಡು ಅವರ ಮನೆಯೂ ಸಹ ಇರುತ್ತದೆ ಎಂದರೆ ಸರಿ. ನ್ಯಾಯಾಲಯದ ಉತ್ತರ ದಿಕ್ಕಿಗೆ ಆರೋಪಿಗೆ ಸಂಬಂಧಪಟ್ಟ ಕಟ್ಟಿಗೆ ಕೊರೆಯುವ ಮಿಲ್ ಸಹ ಇರುತ್ತದೆ ಎಂದರೆ ಗೊತ್ತಿರುವುದಿಲ್ಲ. ಆದ ಕಾರಣ ಆರೋಪಿಯು ತನಿಖೆಗೆ ಸಿಕ್ಕಿರುವುದಿಲ್ಲ ಎಂದು ನೀವು ಉದ್ದೇಶಪೂರ್ವಕವಾಗಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಪಂಚರನ್ನು ಯಾರು ಕರೆದಿರುತ್ತಾರೆ ಎಂದರೆ ಸಾಕ್ಷಿಯು ನ್ಯಾಯಾಲಯದ ಹತ್ತಿರ ಇದ್ದವರನ್ನೇ ಕರೆದಿರುತ್ತೇವೆ ಎಂದು ನುಡಿಯುತ್ತಾರೆ. ಅವರು ಯಾಕೆ ಬಂದಿದ್ದರು ಎಂದು ಚೌಕಾಸಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ನ್ಯಾಯಾಲಯದಲ್ಲಿ ಕೆಲಸ ಇದ್ದ ಕಾರಣ ಬಂದಿರುತ್ತೇವೆ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ನೀವೇನಾದರೂ ಪಂಚರನ್ನು ತಹಶೀಲ್ದಾರ ಕಚೇರಿಯ ಗಣಪತಿಯ ದೇವಸ್ಥಾನದ ಎದುರಿಗೆ ಹೋಗಿ ಕರೆದಿರುತ್ತೀರಾ ಎಂದರೆ ಸಾಕ್ಷಿಯು ಕರೆದಿರುವುದಿಲ್ಲ ಎಂದು ನುಡಿಯುತ್ತಾರೆ. ಪಂಚನಾಮೆಯನ್ನು ಯಾರು ಬರೆದಿರುತ್ತಾರೆ ಎಂದರೆ ಸಾಕ್ಷಿಯು ನಾನು ಹೇಳಿದ್ದನ್ನು ನಮ್ಮ ಸಿಬ್ಬಂದಿಯವರು ಪಂಚರ ಸಮಕ್ಷಮ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ಆ ರೀತಿ ನಿಮ್ಮ ಪಂಚನಾಮೆಯಲ್ಲಿ ನಮೂದು ಮಾಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪಂಚನಾಮೆ ಬರೆದ ಸಿಬ್ಬಂದಿಯವರ ಹೇಳಿಕೆಯನ್ನು ಏನಾದರೂ ದಾಖಲಿಸಿಕೊಂಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನ್ಯಾಯಾಲಯದಿಂದ ಪ್ರಕರಣವನ್ನು ತನಿಖೆ ಮಾಡಲು ಆದೇಶ ಮಾಡಿದಾಗ ಅದನ್ನು ಗಭೀರವಾಗಿ ಪರಿಗಣಿಸಬೇಕಾ ಅಥವಾ ಲಘುವಾಗಿ

ಪರಿಗಣಿಸಬೇಕಾ ಎಂದರೆ ಸಾಕ್ಷಿಯು ಗಂಭೀರವಾಗಿ ಪರಿಗಣಿಸಬೇಕು ಎಂದು ನುಡಿಯುತ್ತಾರೆ. ಅಂತಹ ಸಂದರ್ಭದಲ್ಲಿ ಪಂಚನಾಮೆಯಲ್ಲಿ ಯಾರು ಬರೆದಿರುತ್ತಾರೆ ಹಾಗೂ ಯಾರು ಹೇಳಿ ಬರೆಸಿರುತ್ತಾರೆ ಎಂದು ವಿವರಣೆ ಕೊಡಬೇಕಾಗುತ್ತದೆ ಎಂದರೆ ಸರಿ. ನೀವು ಠಾಣೆಯಲ್ಲಿ ಪಂಚನಾಮೆಯನ್ನು ಸೃಷ್ಟಿ ಮಾಡಿಕೊಂಡಾಗ ಮಾತ್ರ ಇಂತಹ ಪಂಚನಾಮೆಗಳು ಬರುತ್ತವೆ ಎಂದರೆ ಸರಿಯಲ್ಲ. ನೀವು ಹೇಳಿದ ಹಾಗೆ ನೀವು ಮತ್ತು ನಿಮ್ಮ ಸಿಬ್ಬಂದಿಯವರು ತಯಾರಿಸಿದ ಪಂಚನಾಮೆ ಆಗಿರುವುದಿಲ್ಲ, ಬದಲಾಗಿ ನೀವು ಮತ್ತು ಚಾಸಾ-1 ರವರು ಸೃಷ್ಟಿ ಮಾಡಿಕೊಂಡಂತಹ ಪಂಚನಾಮೆ ಆಗಿರುತ್ತದೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಖಾಂತರ ಬಂದಾಗ ತನಿಖೆಯನ್ನು ಜವಾಬ್ದಾರಿಯಿಂದ ಮಾಡಬೇಕಾಗುತ್ತದೆ ಎಂದರೆ ಸರಿ.

5. ನೀವು ನ್ಯಾಯಾಲಯಕ್ಕೆ ಪಂಚನಾಮೆಗೆ ಬಂದಿರುತ್ತೀರಿ ಎಂದು ಹೇಳಿದ ಸಂದರ್ಭದಲ್ಲಿ ನ್ಯಾಯಾಲಯದಲ್ಲಿ ವಕೀಲರು, ಸಿಬ್ಬಂದಿಯವರು ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನೀವು ತನಿಖಾಧಿಕಾರಿಯಾಗಿ ಬಂದಾಗ, ವಕೀಲರಿಗೆ, ಸರಕಾರಿ ವಕೀಲರಿಗೆ ಅಥವಾ ಸಿಬ್ಬಂದಿಗೆ ಈ ರೀತಿ ಘಟನೆ ನಡೆದಿದೆಯಾ ಎಂದು ಅವರನ್ನು ವಿಚಾರಣೆ ಮಾಡಲು ನಿಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ನಿಮಗೆ ಚಾಸಾ-2 ಮತ್ತು 3 ರವರ ವೈಯಕ್ತಿಕ ಮಾಹಿತಿ ಇತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಚಾಸಾ-2 ಮತ್ತು 3 ರವರು ಚಾಸಾ-1 ರವರ ಚೇಲಾಗಳು ಹಾಗೂ ಎಡಗೆ ಮತ್ತು ಬಲಗೈ ಆಗಿದ್ದರು ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಆದ ಕಾರಣ

ಚಾಸಾ–1 ರವರು ಅವರಿಬ್ಬರನ್ನು ಠಾಣೆಗೆ ಕರೆದುಕೊಂಡು ಬಂದು, ಠಾಣೆಯಲ್ಲಿ ಪಂಚನಾಮೆಯನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಯಾವುದೇ ಒಂದು ಪ್ರಕರಣದಲ್ಲಿ ಸ್ಥಳದಲ್ಲಿ ತನಿಖೆ ಮಾಡಬೇಕಾದರೆ ಸ್ಥಳದ ಅಕ್ಕಪಕ್ಕದಲ್ಲಿ ಇದ್ದ ಜನರ ವಿಚಾರಣೆ ಮಾಡಿದಾಗ ಮಾತ್ರ ಪ್ರಾಮಾಣಿಕ ತನಿಖೆ ಆಗುತ್ತದೆ ಎಂದರೆ ಸರಿ. ಈ ಪ್ರಕರಣದಲ್ಲಿ ತೋರಿಸಿದ ಪಂಚರು ಹಾಗೂ ಸಾಕ್ಷಿದಾರರು ಸ್ಥಳೀಯರು ಆಗಿರುವುದಿಲ್ಲ ಎಂದರೆ ಸಾಕ್ಷಿಯು ಅವರು ಪ್ರತ್ಯಕ್ಷದರ್ಶಿಯಾಗಿದ್ದರಿಂದ ಅವರ ಹೆಸರನ್ನು ತೆಗೆದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಎಲ್ಲ ಸಾಕ್ಷಿದಾರರು ಚಾಸಾ–1 ರವರ ಚೇಲಾಗಳು ಆಗಿದ್ದರಿಂದ ಚಾಸಾ–1 ರವರ ಮಾತನ್ನು ಕೇಳಿಕೊಂಡು ಸುಳ್ಳು ಪ್ರಕರಣ ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ. ಶಿರಸ್ತೇದಾರ ಕಚೇರಿಯಿಂದ ಮುಂದೆ ಕಡಪಾ ಕಲ್ಲುಗಳನ್ನು ಹಾಕಲಾಗಿದೆ ಎಂದರೆ ಸರಿ. ಚಾಸಾ–1 ರವರು ಅದನ್ನು ಯಾಕೆ ಹೇಳಿರುತ್ತಾರೆ ಎಂದರೆ ಸಾಕ್ಷಿಯು ನಾನು ಕಡಪಾ ಕಲ್ಲಿನ ಮೇಲೆ ಕುಳಿತುಕೊಂಡಾಗ ಅವರು ಬಂದು ಬೈದಿರುತ್ತಾರೆ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಆ ದಿನ ಚಾಸಾ–1 ರವರು ಘಟನೆಯಾಯಿತು ಎನ್ನುವ ಸ್ಥಳವು ಶಿರಸ್ತೇದಾರ ಕಚೇರಿ ಮುಂದೆ ಇರುವ ಕಡಪಾ ಕಲ್ಲಿನ ಮೇಲೆ ಕುಳಿತುಕೊಂಡಾಗ ಆಗಿದ್ದೇ ಇರುವುದಿಲ್ಲ ಎಂದು ಹೇಳಿರುತ್ತಾರೆ ಎಂದರೆ ಸಾಕ್ಷಿಯು ಅವರು ನಮಗೆ ಅದೇ ರೀತಿ ತೋರಿಸಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಆದ್ದರಿಂದ ಸಂಪೂರ್ಣ ಪಂಚನಾಮೆ ಹಾಗೂ ಅದರಲ್ಲಿ ಬರೆದ ಬರವಣಿಗೆ ಚಾಸಾ–1 ರವರ ಮಾತನ್ನು ಕೇಳಿಕೊಂಡು ಸಂದರ್ಭಕ್ಕೆ ತಕ್ಕ ಹಾಗೆ ಠಾಣೆಯಲ್ಲೇ ಕುಳಿತುಕೊಂಡು ಸೃಷ್ಟಿ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಅದೇ

ರೀತಿ ಪಂಚನಾಮೆಯಲ್ಲಿ ಸಹಿಗಳನ್ನೂ ಸಹ ಠಾಣೆಯಲ್ಲೇ ಕುಳಿತುಕೊಂಡು ಸೃಷ್ಟಿ ಮಾಡಿಕೊಂಡಿದ್ದು, ನ್ಯಾಯಾಲಯದಲ್ಲಿ ಯಾವುದೇ ಪಂಚನಾಮೆಯನ್ನು ಮಾಡಿದ್ದೇ ಇರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-4 ಮತ್ತು 5 ರವರನ್ನು ನೀವು ಯಾವ ರೀತಿ ಕರೆಸಿಕೊಂಡಿರುತ್ತೀರಿ ಎಂದರೆ ಸಾಕ್ಷಿಯು ನಮ್ಮ ಸಿಬ್ಬಂದಿಯವರ ಮುಖಾಂತರ ಅವರನ್ನು ಕರೆಸಿರುತ್ತೇವೆ ಎಂದು ನುಡಿಯುತ್ತಾರೆ. ಯಾವ ಸಿಬ್ಬಂದಿ ಕರೆದುಕೊಂಡು ಬಂದಿರು, ಆ ಸಿಬ್ಬಂದಿಯ ಹೇಳಿಕೆಯನ್ನು ಏನಾದರೂ ದಾಖಲಿಸಿಕೊಂಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ಎಷ್ಟು ಹೊತ್ತಿಗೆ ನಿಮ್ಮ ಸಿಬ್ಬಂದಿಯವರಿಗೆ ಕಳುಹಿಸಿಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ಬೆಳಿಗ್ಗೆ 8 ಗಂಟೆಗೆ ಕಳುಹಿಸಿರುತ್ತೇವೆ ಎಂದು ನುಡಿಯುತ್ತಾರೆ. ಮತ್ತು ಹೇಳಿಕೆಯನ್ನು ದಾಖಲಿಸಿಕೊಳ್ಳುವ ಸಮಯದಲ್ಲಿ ಅವರನ್ನು ಎಷ್ಟು ಗಂಟೆಗೆ ಕರೆಸಿರುತ್ತೀರಿ ಎಂದರೆ ಸಾಕ್ಷಿಯು ಮಧ್ಯಾಹ್ನ ಬಂದು ಹಾಜರು ಆಗಿರುತ್ತಾರೆ ಎಂದು ನುಡಿಯುತ್ತಾರೆ. ಆ ದಿನ ಚಾಸಾ-1 ರವರನ್ನು ಎಷ್ಟು ಗಂಟೆಗೆ ಪ್ರತ್ಯಕ್ಷವಾಗಿ ಭೇಟಿಯಾಗಿರುತ್ತೀರಿ ಎಂದರೆ ಸಾಕ್ಷಿಯು ಬೆಳಿಗ್ಗೆ 10 ಗಂಟೆಗೆ ಠಾಣೆಗೆ ಬಂದಿದ್ದರು ಎಂದು ನುಡಿಯುತ್ತಾರೆ. ನ್ಯಾಯಾಲಯದಿಂದ ತನಿಖೆ ಮಾಡಲು ಕಳುಹಿಸಿದ ದಾಖಲಾತಿಗಳಲ್ಲಿ ಚಾಸಾ-4 ಮತ್ತು 5 ರವರ ಹೆಸರು ಇರಲಿಲ್ಲ ಎಂದರೆ ಸರಿ. ಹಾಗಿದ್ದರೆ ಚಾಸಾ-4 ಮತ್ತು 5 ರವರು ಸದರಿ ಘಟನೆಗೆ ಸಂಬಂಧಪಟ್ಟ ಪ್ರತ್ಯಕ್ಷದಾರರು ಎಂದು ನಿಮಗೆ ಹೇಗೆ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿಯು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸುವ ಸಂದರ್ಭದಲ್ಲಿ ಫಿರ್ಯಾದಿಯು ಫೋನ್ ಮುಖಾಂತರ ಹೇಳಿದ್ದ ಮೇರೆಗೆ ಸಾಕ್ಷಿದಾರರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನಿಮಗೆ

ಫಿರ್ಯಾದಿಯವರ ಪರಿಚಯ ಮೊದಲಿನಿಂದಲೂ ಇತ್ತು ಎಂದರೆ ಸಾಕ್ಷಿಯು ಅಷ್ಟೊಂದು ಇರಲಿಲ್ಲ ಎಂದು ನುಡಿಯುತ್ತಾರೆ. ಫಿರ್ಯಾದಿಯು ನೀಡಿದ ಫಿರ್ಯಾದಿಯಲ್ಲಿ ಅವರು ಫೋನ್ ನಂಬರ್ ಎಲ್ಲಿಯೂ ಸಹ ಇರುವುದಿಲ್ಲ ಎಂದರೆ ಸರಿಯಲ್ಲ. ನೀವೇನಾದರೂ ಚಾಸಾ-1 ರವರಿಗೆ ತಮ್ಮ ಫಿರ್ಯಾದಿಯಲ್ಲಿ ಚಾಸಾ-6 ರವರ ಹೆಸರನ್ನು ಮಾತ್ರ ನಮೂದು ಮಾಡಿದ್ದು, ಚಾಸಾ-4 ಮತ್ತು 5 ರವರ ಹೆಸರುಗಳನ್ನು ಯಾಕೆ ನಮೂದು ಮಾಡಿರುವುದಿಲ್ಲ ಎಂದು ವಿಚಾರಣೆ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಗಡಿಬಿಡಿಯಲ್ಲಿ ಅವರ ಹೆಸರನ್ನು ನಮೂದು ಮಾಡಿರುವುದಿಲ್ಲ ಎಂದು ಫಿರ್ಯಾದಿ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಇದನ್ನು ನೀವು ಫಿರ್ಯಾದಿಯ ಹೇಳಿಕೆಯಲ್ಲಿ ಬರೆದಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಚಾಸಾ-1 ರವರ ಪ್ರಭಾವದಿಂದ ಫಿರ್ಯಾದಿಯ ಹೇಳಿಕೆ ಎಂದು ಸೃಷ್ಟಿ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಹಾಗೂ ಅವರು ನೀಡಿದ ಇಬ್ಬರೂ ಸಾಕ್ಷಿದಾರರು ಪ್ರತ್ಯಕ್ಷ ಸಾಕ್ಷಿದಾರರು ಅಲ್ಲ ಎಂದು ನಿಮಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಘಟನೆಯಾಯಿತು ಎನ್ನುವ ದಿನದಂದು ಈ ಇಬ್ಬರು ಸಾಕ್ಷಿದಾರರು ನ್ಯಾಯಾಲಯದ ಒಳಗಡೆ ಬಂದಿದ್ದೇ ಇರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಚಾಸಾ-6 ರವರೂ ಸಹ ಪ್ರತ್ಯಕ್ಷ ಸಾಕ್ಷಿದಾರರು ಆಗಿರಲಿಲ್ಲ ಎಂದರೆ ಸರಿಯಲ್ಲ.

6. ತನಿಖೆ ಮಾಡಿ, ಅಂತಿಮ ವರದಿಯನ್ನು ಸಲ್ಲಿಸಲು ಯಾವ ಕಾರಣಕ್ಕಾಗಿ ವಿಳಂಬವಾಗಿರುತ್ತದೆ ಎಂದು ಮಾನ್ಯ ನ್ಯಾಯಾಲಯಕ್ಕೆ ಏನಾದರೂ ಹೇಳಿಕೆ

ನೀಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ನೀವು ಗಂಭೀರವಾಗಿ ತನಿಖೆಯನ್ನು ಮಾಡಿದ್ದೇ ಇರುವುದಿಲ್ಲ, ಚಾಸಾ–1 ರವರ ಮಾತನ್ನು ಕೇಳಿಕೊಂಡು ಸುಳ್ಳು ಪ್ರಕರಣ ಸೃಷ್ಟಿಸಿ, ಆರೋಪಿಯನ್ನು ಬಲಿಪಶು ಮಾಡಿರುತ್ತೀರಿ ಎಂದರೆ ಸರಿಯಲ್ಲ. ನಿಮ್ಮ ಪ್ರಕಾರ ತನಿಖೆಯನ್ನು ಫಿರ್ಯಾದಿಯ ಹೇಳಿಕೆ ಮೇರೆಗೆ ಮಾಡಬೇಕೊ ಅಥವಾ ಸ್ವತಂತ್ರವಾಗಿ ಮಾಡಬೇಕಾ ಎಂದರೆ ಸಾಕ್ಷಿಯು ಸ್ವತಂತ್ರವಾಗಿ ಸಾಕ್ಷಿದಾರರ ಹೇಳಿಕೆಗಳನ್ನು ದಾಖಲಿಸಿಕೊಳ್ಳಬೇಕು ಎಂದು ನುಡಿಯುತ್ತಾರೆ. ಚಾಸಾ–4 ಮತ್ತು 6 ರವರು ಪ್ರತ್ಯಕ್ಷ ಸಾಕ್ಷಿದಾರರು ಎಂದು ನಿಮಗೆ ಹೇಗೆ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿಯು ಚಾಸಾ–1 ರವರು ಹೇಳಿದ ಮೇರೆಗೆ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ನೀವು ನ್ಯಾಯಾಲಯಕ್ಕೆ ತನಿಖೆ ಮಾಡಲು ಬಂದಾಗ ಯಾವುದಾದರೂ ಸಿಬ್ಬಂದಿಯವರನ್ನು ಅಥವಾ ಅಕ್ಕಪಕ್ಕದವರನ್ನು ಈ ದಿನ ಇಂತಹ ಘಟನೆ ನಡೆದಿದೆ ಎಂದು ಚೌಕಾಸಿ ಮಾಡಲು ಏನಾದರೂ ಸಮಸ್ಯೆ ಇತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ಪ್ರತ್ಯಕ್ಷ ತನಿಖೆ ಮಾಡಿದ್ದರೆ ಬೇರೆ ಆಗುತ್ತಿದ್ದು, ಆದರೆ ಬೇರೆಯವರ ಹೇಳಿಕೆ ಮೇರೆಗೆ ತನಿಖೆ ಮಾಡಿದ್ದರೆ ತನಿಖೆಯಲ್ಲಿ ವ್ಯತಿರಿಕ್ತ ಆಗುತ್ತದೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ನೀವು ತನಿಖಾಧಿಕಾರಿಗಳಾಗಿ ಬಂದಾಗ, ಸಾಕಷ್ಟು ವಕೀಲರು, ಸರಕಾರಿ ಅಭಿಯೋಜಕರ ಪರಿಚಯವಿದ್ದು, ಅವರನ್ನು ಏನಾದರೂ ಕೇಳಲು ಸಮಸ್ಯೆ ಇತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ಅಂಕೋಲಾದಲ್ಲಿ ಕರ್ತವ್ಯದಲ್ಲಿ ಇದ್ದಾಗ ಫಿರ್ಯಾದಿಯು ದೊಡ್ಡ ಹೋರಾಟಗಾರರದು ಎಂದು ಹೇಳಿಕೊಂಡು ಪೋಲೀಸರು ಹಾಗೂ ಸಿಬ್ಬಂದಿಯವರ ಮೇಲೆ ಹೋರಾಟ ನಡೆಸುತ್ತಿದ್ದರು ಎಂದರೆ ಅದರ ಬಗ್ಗೆ ನನಗೆ

ಮಾಹಿತಿ ಇರುವುದಿಲ್ಲ. ಈ ರೀತಿ ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಪ್ರಕಾರ ಸಮಾಜಸೇವಕ ಎಂದು ವೃತ್ತಿ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಚಾಸಾ-1 ರವರು ಪತ್ರಿಕೆಯಲ್ಲಿ ಯಾವಾಗಲೂ ಸಹ ಮಿಂಚುತ್ತಿದ್ದರು ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನ್ಯಾಯಾಲಯದಿಂದ ತನಿಖೆ ಮಾಡಲು ಆದೇಶ ಬಂದಾಗ ನಿಮಗೆ ಸದರಿ ಪ್ರಕರಣದಲ್ಲಿ ಯಾವುದೇ ಸತ್ಯಾಂಶ ಇರುವುದಿಲ್ಲ ಎಂದು ಗೊತ್ತಿತ್ತು ಎಂದರೆ ಸರಿಯಲ್ಲ. ಸಾಕ್ಷಿದಾರರನ್ನು ಪೊಲೀಸ್ ಸಿಬ್ಬಂದಿ ಮುಖಾಂತರ ಕಾರವಾರದಿಂದ ಕರೆಸಿರುತ್ತೀರಿ ಎನ್ನುವುದೂ ಸಹ ಸುಳ್ಳು ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿಯು ನಿಮಗೆ ತನಿಖೆಯಲ್ಲಿ ನಿಮಗೆ ಸಿಕ್ಕಿರುವುದಿಲ್ಲ ಎಂದ ಹೇಳಿರುವುದೂ ಸಹ ಸುಳ್ಳು ಎಂದರೆ ಸರಿಯಲ್ಲ. ಪಂಚರು ಹಾಗೂ ಎಲ್ಲ ಸಾಕ್ಷಿದಾರರು ಚಾಸಾ-1ರವರ ಚೇಲಾಗಳು ಆಗಿದ್ದರಿಂದ ಕೇವಲ ಹೆಸರಿಗೋಸ್ಕರ ಒಂದು ಸುಳ್ಳು ತನಿಖೆಯನ್ನು ಮಾಡಿರುತ್ತೀರಿ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಘಟನೆ ಆಗದಿದ್ದರೂ ಸಹ ನ್ಯಾಯಾಲಯದಲ್ಲಿ ಪ್ರಾಮಾಣಿಕವಾಗಿ ತನಿಖೆ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿ ಹಾಗೂ ಫಿರ್ಯಾದಿಯ ಮಧ್ಯ ಮೊದಲಿನಿಂದಲೂ ಸಂಬಂಧ ಚೆನ್ನಾಗಿ ಇಲ್ಲ ಎಂದು ನಿಮಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನೀವು ಸುಳ್ಳು ಪ್ರಕರಣಕ್ಕೆ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಜೆ.ಎಂ.ಎಫ್.ಸಿ., ಅಂಕೋಲಾ.